ಶ್ರೀಗಂಧ ಕಾವಲು ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ವಿದ್ಯಾನಿಕೇತನ ಶಾಲೆ ಸುಂಕದಕಟ್ಟೆ ಬಾಲಕಿಯರು ಕಬ್ಬಡಿ ಪಂದ್ಯಾವಳಿಯಲಿ ವಿಜಯಶಾಲಿಯಾದರು.

ಸೌಜನ್ಯ ಕೊಲೆ ಪ್ರಕರಣ ಮರು ತನಿಖೆಗೆ ಒತ್ತಾಯ

ಬೆಂಗಳೂರು ಹೊರವಲಯ ಆನೇಕಲ್ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಭೆ ಬಳಿಕ ಪ್ರತಿಭಟನೆ ನಡೆಸಿದ ಕರವೇ ಸಂಘಟನೆ ಪದಾಧಿಕಾರಿಗಳು, ಸೌಜನ್ಯ ಪ್ರಕರಣವನ್ನು ಮರು ತನಿಖೆಗೆ ಕರವೇ ಒತ್ತಾಯ ಮಾಡುತ್ತಿರುವುದು.

ಆನೇಕಲ್: ಸೌಜನ್ಯ ಕೊಲೆ ಪ್ರಕರಣ ಮರು ತನಿಖೆಗೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಶಿವರಾಮೇಗೌಡ ಬಣ ಪತ್ರಿಕಾಗೋಷ್ಟಿ ನಡೆಸುವ ಮೂಲಕ ಪ್ರತಿಭಟನೆ ನಡೆಸಿದ್ದಾರೆ. ಬೆಂಗಳೂರು ಹೊರವಲಯ ಆನೇಕಲ್ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಭೆ ಬಳಿಕ ಪ್ರತಿಭಟನೆ ನಡೆಸಿದ ಕರವೇ ಸಂಘಟನೆ ಪದಾಧಿಕಾರಿಗಳು, ಸೌಜನ್ಯ ಪ್ರಕರಣವನ್ನು ಮರು ತನಿಖೆಗೆ ಕರವೇ ಒತ್ತಾಯ ಮಾಡುತ್ತದೆ, ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಕೊಲೆ ಪ್ರಕರಣದಲ್ಲಿ ಅವರ ಕುಟುಂಬಕ್ಕೆ ನ್ಯಾಯ ದೊರಕಿಸಿ ಕೊಡುವಲ್ಲಿ ಪೊಲೀಸ್ ಅಧಿಕಾರಿಗಳು ವಿಫಲರಾಗಿದ್ದಾರೆ, ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳಿಗೆ ಗೌರವ ನೀಡುವ ಕೆಲಸವನ್ನು ಮಾಡುತ್ತೇವೆ ಆದರೆ ಸೌಜನ್ಯ ಪ್ರಕರಣದಲ್ಲಿ ತನಿಖೆ ದಾರಿ ತಪ್ಪಿರುವುದು ನೋವಿನ ಸಂಗತಿ.

ಕೊಲೆ ಪ್ರಕರಣವನ್ನು ರಾಜ್ಯ ಸರಕಾರ ಮರು ತನಿಕೆಗೆ ಒತ್ತಾಯಿಸಬೇಕು ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ಅಪರಾಧಿ ಯಾರು ಎಂದು ಕಂಡು ಹಿಡಿಯುವಲ್ಲಿ ಇಷ್ಟೊಂದು ವಿಳಂಬ ಆಗಿರುವುದು ತನಿಖೆಯ ದಾರಿ ತಪ್ಪಿಸಲು ಬೇಕಾದ ಕೆಲಸವನ್ನು ಮಾಡಿದಂತೆ ಇದ್ದು ಸೌಜನ್ಯ ಕುಟುಂಬಸ್ಥರು ಕೊನೆ ಪ್ರಕರಣದಲ್ಲಿ ನ್ಯಾಯ ದೊರಕಿಸಿ ಕೊಡುವಂತೆ ಈ ಹಿಂದೆ ಹಲವಾರು ಬಾರಿ ಕಣ್ಣೀರು ಹಾಕಿದರು ಸಹ ಇದುವರೆಗೂ ಕೂಡ ಹೋರಾಟಗಳಿಗೂ ಯಾವುದೇ ಬೆಲೆ ಸಿಕ್ಕಿಲ್ಲ, ಪೊಲೀಸರು ಅಮಾಯಕ ಸಂತೋಷ್ ರಾವ್ ಎಂಬಾತನನ್ನು ಬಂಧಿಸಿ ಕಿರುಕುಳ ನೀಡಿದ್ದಾರೆ. ನ್ಯಾಯಾಲಯದಿಂದ ನಿರಪರಾಧಿ ಎಂದು ತೀರ್ಪು ಬಂದಿದ್ದು ಕೃತ್ಯ ನಡೆಸಿರುವ ನಿಜವಾದ ಆರೋಪಿ ಯಾರು ಎಂದು ಕಂಡುಹಿಡಿಯದೆ ತನಿಖೆಯ ಹಾದಿ ತಪ್ಪಿಸಲಾಗುತ್ತಿದೆ. ಕೂಡಲೇ ವಿಶೇಷ ತಂಡವನ್ನ ರಚನೆ ಮಾಡಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಸಮಾಚಾರ ಸಣ್ಣದಲ್ಲ

ಗೌರಿಬಿದನೂರು ಕಾಂಗ್ರೆಸ್ ಭದ್ರಕೋಟೆ

ಗೌರಿಬಿದನೂರು : ತಾಲೂಕು ಇಂದಿಗೂ ಕೂಡ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾಗಿ ಉಳಿದಿದ್ದು ಅದನ್ನು ಮುರಿಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಕೃಷಿ ಸಚಿವ ಎನ್ ಹೆಚ್ ಶಿವಶಂಕರರೆಡ್ಡಿ ಹೇಳಿದರು. ತಾಲೂಕಿನ ಡಿ. ಪಾಳ್ಯ ಹೋಬಳಿಯ ನಾಮಗೊಂಡ್ಲು ಗ್ರಾ. ಪಂ. ಮಾತನಾಡಿದರು. ಸಮಾಜ ಸೇವಕ ಕೆಂಪರಾಜು ಬಣದ ಬೆಂಬಲಿತ ಅಭ್ಯರ್ಥಿಗಳು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಸೂಚಿಸುತ್ತಿರುವುದರಿಂದ ತಾಲೂಕಿನಲ್ಲಿ 20 ಕ್ಕೂ ಹೆಚ್ಚು ಗ್ರಾ. ಪಂ.ಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ನಿರೀಕ್ಷೆ ಇದೆ. ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಇಬ್ಬರೂ ಒಂದೇ ಕುಟುಂಬದ ಸದಸ್ಯರಿದ್ದಂತೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವ ಮೂಲಕ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಹಾಗೂ ತಾಲೂಕಿನ ಜನತೆಗೆ ಕಾಂಗ್ರೆಸ್ ಪಕ್ಷದ ಮೇಲೆ ತುಂಬಾ ಅಭಿಮಾನ ಮತ್ತು ವಿಶ್ವಾಸ ಇಟ್ಟುಕೊಂಡಿದ್ದಾರೆ. ಮುಂದಿನ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಲೋಕಸಭೆ ಚುನಾವಣೆಗಳಲ್ಲಿ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯುವುದು ನಿಶ್ಚಿತ. ವಿಧಾನಸಭೆ ಚುನಾವಣೆಯಲ್ಲಿ ಕೆಲವು ಕಾರಣಾಂತರಗಳಿಂದ ಸೋತಿರಬಹುದು ಆದರೆ ಪಕ್ಷದ ಸಂಘಟನೆಯಲ್ಲಿ ಸೋತಿಲ್ಲ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಮುಖಂಡರು ಹಾಗೂ ಕಾರ್ಯಕರ್ತರು ಇರುವವರೆಗೆ ಕಾಂಗ್ರೆಸ್ ಪಕ್ಷಕ್ಕೆ ಸೋಲೇ ಇಲ್ಲ ಎಂದು ಹೇಳಿದರು.

ಗುರು
ಪ್ರತಿ ಗುರುವಾರ

ನೈರುತ್ಯ ವಲಯದ 15 ನಿಲ್ದಾಣ ಆಧುನೀಕರಣ

‘ಅಮೃತ್ ಭಾರತ್ ಸ್ಟೇಷನ್ ಸ್ಕೀಮ್’ನಡಿ ಅನುಷ್ಠಾನ | ಒಟ್ಟು 356 ಕೋಟಿ ರೂ. ಅನುದಾನ

ಮೈಸೂರು: ಕೇಂದ್ರ ಸರಕಾರದ ಅಮೃತ್ ಭಾರತ್ ಸ್ಟೇಷನ್ ಸ್ಕೀಮ್ ಯೋಜನೆಯಡಿ ನೈರುತ್ಯ ರೈಲ್ವೆ ಮೈಸೂರು ವಿಭಾಗದ 15 ನಿಲ್ದಾಣಗಳ ಉನ್ನತೀಕರಣ, ಆಧುನೀಕರಣ ಮಾಡಲಾಗುತ್ತದೆ ಎಂದು ನೈರುತ್ಯ ರೈಲ್ವೆ ವಿಭಾಗದ ವ್ಯವಸ್ಥಾಪಕಿ ಶಿಲ್ಪಾ ಅಗರ್‌ವಾಲ್ ತಿಳಿಸಿದರು.

ಮೊದಲ ಹಂತದಲ್ಲಿ ಅರಸೀಕೆರೆ, ಹರಿಹರ ನಿಲ್ದಾಣಗಳ ಕಾಮಗಾರಿಗೆ ಆ.6ರಂದು ಬೆಳಗ್ಗೆ 11 ಗಂಟೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಲಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಶೌಚಾಲಯ, ಲಿಫ್ಟ್, ಎಸ್ಕಲೇಟರ್ ಸೌಲಭ್ಯ ಒದಗಿಸಲಿದೆ. ಸ್ವಚ್ಛತೆಗೆ ಒತ್ತು, ಉಚಿತ ವೈಫೈ ಸೇವೆ, ಒಂದು ನಿಲ್ದಾಣ ಒಂದು ಉತ್ಪನ್ನಯೋಜನೆಯಡಿ ಪ್ರಚಾರ, ಪ್ರಯಾಣಿಕರಿಗೆ ಮಾಹಿತಿ, ಐಶಾರಾಮಿ ವಿಶ್ರಾಂತಿ ಕೊಠಡಿ, ವ್ಯಾಪಾರ ಮಳಿಗೆ ನಿರ್ಮಿಸಲಾಗುತ್ತದೆ. ಒಟ್ಟಾರೆ ನಿಲ್ದಾಣಗಳ ಅಂದ ಹೆಚ್ಚಿಸುವಂತೆ ಯೋಜನೆ ರೂಪುಗೊಂಡಿದೆ ಎಂದರು.

ಅರಸೀಕೆರೆಗೆ 34.13 ಕೋಟಿ, ಹರಿಹರ ನಿಲ್ದಾಣಕ್ಕೆ 25.21 ಕೋಟಿ ರೂ. ದೊರೆತಿದೆ. ವರ್ಷಾಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸುವ ಗುರಿಯಿದೆ. ಒಟ್ಟಾರೆ 15 ನಿಲ್ದಾಣಗಳ ಅಭಿವೃದ್ಧಿಗೆ ಅಂದಾಜು 356 ಕೋಟಿ ರೂ. ನೆರವು ದೊರೆತಿದೆ ಎಂದು ವಿವರಿಸಿದರು.

18 ನಿಲ್ದಾಣಗಳು : ಚಾಮರಾಜನಗರ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಬಂಟ್ವಾಳ, ಹಾಸನ, ತಿಪಟೂರು, ಅರಸೀಕೆರೆ, ಚಿಕ್ಕಮಗಳೂರು, ತಾಳಗುಪ್ಪ, ಸಾಗರ ಜಂಬಗಾರು, ಶಿವಮೊಗ್ಗ ಟೌನ್, ಚಿತ್ರದುರ್ಗ, ದಾವಣಗೆರೆ, ಹರಿಹರ, ರಾಣೆಬೆನ್ನೂರು ನಿಲ್ದಾಣಗಳು ಆಯ್ಕೆಗೊಂಡಿವೆ.

ಅರಸೀಕೆರೆ ನಿಲ್ದಾಣ: ಹೊಸ ನಿಲ್ದಾಣ ಕಟ್ಟಡ, ಪ್ರಯಾಣಿಕ ಸೌಕರ್ಯಗಳ ಸುಧಾರಣೆ, ಗ್ರಾನೈಟ್ ನೆಲಹಾಸು, ಪ್ಲಾಟ್ ಫಾರಂ ಕಾಂಕ್ರಿಟ್ ನೆಲಹಾಸು, 12 ಮೀಟರ್ ಪಾದಚಾರಿ ಮೇಲ್ಸುತುವೆ, ಶೌಚಾಲಯ, ಸಿಸಿಟಿವಿ, ವೈಫೈ, 6 ಸಾಲುಗಳ ರೈಲು ಆಗಮನ, ನಿರ್ಗಮನ, ಲಿಫ್ಟ್, 2 ಎಸ್ಕಲೇಟರ್, ಪ್ರವೇಶ, ನಿರ್ಗಮನ ಕಮಾನು ನಿರ್ಮಾಣ ಸೇರಿದಂತೆ 12 ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತದೆ ಎಂದರು.

ಹರಿಹರ ನಿಲ್ದಾಣ: ಹೊಸ ಬುಕ್ಕಿಂಗ್ ಕಚೇರಿ, ವಿಶ್ರಾಂತಿ ಕೊಠಡಿ, ಪ್ರಯಾಣಿಕರ ಸೌಕರ್ಯ, ಒಂದು ಬದಿ ಮೆಟ್ಟಿಲು, ಇನ್ನೊಂದು ಬದಿ ಲಿಫ್ಟ್, 2 ಎಸ್ಕಲೇಟರ್, ಶೌಚಾಲಯ, ಸಿಸಿ ಟಿವಿ, ವೈಫೈ, ಎಲ್ ಇಡಿ ಫಲಕ, ಕೋಚ್ ಮಾರ್ಗದರ್ಶನ ಫಲಕ ಅಳವಡಿಕೆ ಸೇರಿ 12 ಕಾಮಗಾರಿ ನಡೆಯಲಿವೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗತಿಶಕ್ತಿ ಚೀಫ್ ಮ್ಯಾನೇಜರ್ ವಿಷ್ಣು ಭೂಷಣ್, ನೈರುತ್ಯ ರೈಲ್ವೆ ಉಪ ವಿಭಾಗೀಯ ವ್ಯವಸ್ಥಾಪಕ ಈ.ವಿಜಯಾ, ಸಾರ್ವಜನಿಕ ಸಂಪರ್ಕ ಅಧಿಕಾರಿ ಜೆ.ಲೋಹಿತೇಶ್ವರ್ ಇದ್ದರು.

> ಈ ಯೋಜನೆಯಡಿ ದೇಶಾದ್ಯಂತ 1275 ನಿಲ್ದಾಣಗಳ ಆಧುನೀಕರಣ, ಉನ್ನತೀಕರಣ ಮಾಡಲಾಗುತ್ತಿದೆ. ನಿಲ್ದಾಣದ ಮೂಲ ಸೌಕರ್ಯ ಸುಧಾರಿಸಲು, ಸಂಪರ್ಕ ಸುಧಾರಣೆ, ಬಹುಮಾದರಿಯ ಸಾರಿಗೆ ವಿಧಾನ ಉತ್ತೇಜನ, ವಿಶೇಷಚೇತನ ವ್ಯಕ್ತಿಗಳಿಗೆ ಅನುಕೂಲ ಕಲ್ಪಿಸಲಾಗುತ್ತದೆ.
>
> -**ಶಿಲ್ಪಾ ಅಗರ್‌ವಾಲ್** ನೈರುತ್ಯ ರೈಲ್ವೆ ವಿಭಾಗದ ವ್ಯವಸ್ಥಾಪಕಿ

ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ಸಚಿವ ಸೂಚನೆ

ಸಭೆಯಲ್ಲಿ ಸಚಿವ ನಾರಾಯಣಸ್ವಾಮಿ ಮಾತನಾಡಿದರು ಸಚಿವ ರಾಜಣ್ಣ ಇದ್ದರು.

ತುಮಕೂರು : ಕೇಂದ್ರ ಸರಕಾರದಿಂದ ಜನ ಕಲ್ಯಾಣಕ್ಕಾಗಿ ಹಲವು ಯೋಜನೆಗಳ ಜಾರಿಗೊಳಿಸಿ, ಅನುದಾನ ಬಿಡುಗಡೆ ಮಾಡಲಾಗಿದೆ, ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವರು ಹಾಗೂ ಜಿಲ್ಲಾ ದಿಶಾ ಸಮಿತಿ ಅಧ್ಯಕ್ಷ ಎ.ನಾರಾಯಣ ಸ್ವಾಮಿ ಸೂಚಿಸಿದರು.

ಜಿಪಂನಲ್ಲಿ ನಡೆದ ಕೇಂದ್ರ ಪುರಸ್ಕೃತ ಯೋಜನೆಗಳ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜನರ ಸಮಸ್ಯೆ ಬಗೆಹರಿಸಲು ಹಾಗೂ ಅಭಿವೃದ್ಧಿಗೆ ಆದ್ಯತೆ ನೀಡಿ ಹಲವಾರು ಯೋಜನೆಗಳನ್ನು ಜಿಲ್ಲೆಗೆ ತರಲಾಗಿದೆ. ತುಮಕೂರು -ರಾಯದುರ್ಗ ಮಾರ್ಗ ಶೀಘ್ರ ಪೂರ್ಣಗೊಳಿ ಸುವುದಾಗಿ ತಿಳಿಸಿದರು.

ಜಿಪಂ. ಉಪ ಕಾರ್ಯ ದರ್ಶಿ(ಅಭಿವೃದ್ಧಿ) ಕೃಷ್ಣಮೂರ್ತಿ ಮಾತನಾಡಿ, 2022-23ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಿಲ್ಲೆಯಲ್ಲಿ 42ಲಕ್ಷ ಮಾನವ ದಿನಗಳನ್ನು ಸೃಜನೆಯಾಗಿದೆ, 2023- 24ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜೂನ್ 30ರ ವರೆಗೂ 12,92, 149 ಮಾನವ ದಿನಗಳನ್ನು ಸೃಜಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಕೇಂದ್ರ ಸರಕಾರದ ಯೋಜನೆಗಳಡಿ ಪ್ರಗತಿ ಸಾಧಿಸಲು ಏನಾದರೂ ಸಮಸ್ಯೆಗಳಿದ್ದರೆ, ಅವುಗಳನ್ನು ತಿಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಶಾಸಕ ಜಿ.ಬಿ.ಜ್ಯೋತಿಗಣೇಶ್, ಮಹಾಪೌರರಾದ ಪ್ರಭಾವತಿ ಸುಧೀಶ್ವರ್, ಕೆ.ಎ ತಿಪ್ಪೇ ಸ್ವಾಮಿ, ಜಿಲ್ಲಾಧಿಕಾರಿ ಕೆ.ಶ್ರೀನಿವಾಸ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಭು.ಜಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶಹಾಪುರವಾಡ್, ಮಹಾನಗರ ಪಾಲಿಕೆ ಆಯುಕ್ತರು ಅಶ್ವಿಜ ಬಿ.ವಿ., ಉಪ ವಿಭಾಗಾಧಿಕಾರಿ ರಿಷಿ ಆನಂದ್, ಜಿಲ್ಲಾ ಪಂಚಾಯಿತ್ ಐಇಸಿ ಸಂಯೋಜಕ ಉಮೇಶ್, ಕೃಷಿ ಇಲಾಖೆ ಉಪ ನಿರ್ದೇಶಕ ಅಶೋಕ್, ದೀಪಶ್ರೀ ಇಲಾಖಾಧಿಕಾರಿಗಳು, ಉಪಸ್ಥಿತರಿದ್ದರು.

> ಜಿಲ್ಲೆಯ ಸಮಸ್ಯೆಗಳನ್ನು ಶಾಶ್ವತ ಪರಿಹಾರ ಕಲ್ಪಿಸಲು ಕ್ರಮವಹಿಸಲಾಗಿದೆ. ಅನುದಾನವನ್ನು ಪ್ರಮುಖವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸರಕಾರದ ಯೋಜನೆಗಳನ್ನು ಫಲಾನುಭವಿಗಳಿಗೆ ಸರಿಯಾಗಿ ತಲುಪಿಸಲು ಕ್ರಮವಹಿಸಬೇಕು.
>
> -**ಎ.ನಾರಾಯಣಸ್ವಾಮಿ** ದಿಶಾ ಸಮಿತಿ ಅಧ್ಯಕ್ಷ

ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್
ನೋಂದಾಯಿತ ಕಛೇರಿ: 27 ಬಿಕೆಸಿ, ಸಿ 27, ಜಿ ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂ), ಮುಂಬೈ-400051
ಶಾಖೆ: ನಂ.60, ಗಾಂಧಿ ಬಜಾರ್ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು-560004, ಕರ್ನಾಟಕ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

ಕೋಟಕ್ ಮಹೀಂದ್ರ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳು ಸೆಕ್ಯುರಿಟೈಸೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ನಿಯಮ 8(6)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರಡಿ ಇ-ಹರಾಜು ಮಾರಾಟ ಸೂಚನೆ.

1. ಈ ಮೂಲಕ ನಿರ್ದಿಷ್ಟವಾಗಿ ಸಾಲಗಾರರು ಮತ್ತು ಜಾಮೀನುದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಕೋಟಕ್ ಬ್ಯಾಂಕ್ ಲಿ. ("ಪೂರಕ ಭದ್ರತಾದಾರರು") ಗೆ ಅಡಮಾನ/ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಅದನ್ನು ಅಧಿಕೃತ ಅಧಿಕಾರಿಯವರು 06.02.2023ರಂದು ಸ್ವಾಧೀನಪಡಿಸಿಕೊಂಡಿದ್ದು, ಅದನ್ನು "ಎಲ್ಲಿ ಹೇಗಿದೆಯೋ ಹಾಗಿನ ಆಧಾರ"ದ ಮೇಲೆ, ಯಾವುದೇ ಅವಲಂಬನೆ ಇಲ್ಲದೆ, ಬ್ಯಾಂಕಿಗೆ ಮೆ॥ ಶ್ರೀ ಮಾರುತಿ ಟ್ರೇಡರ್ಸ್, ಬೆಂಗಳೂರು ಮತ್ತು ಇತರರಿಂದ 31.07.2023ರವರೆಗೆ ಬರಬೇಕಾಗಿರುವ ಬಾಕಿ ಹಣ ರೂ.5,34,89,523.64/- (ಐದು ಕೋಟಿ ಮೂವತ್ತನಾಲ್ಕು ಲಕ್ಷ ಎಂಭತ್ತೊಂಬತ್ತು ಸಾವಿರದ ಐನೂರ ಇಪ್ಪತ್ತಮೂರು ರೂಪಾಯಿಗಳು ಮತ್ತು ಪೈಸೆ ಅರುವತ್ತನಾಲ್ಕು ಮಾತ್ರ) ಹಾಗೂ 01.08.2023ರಿಂದ ಮುಂದುವರಿದ ಬಡ್ಡಿ, ವೆಚ್ಚ, ದರಗಳು ಮತ್ತು ಖರ್ಚುಗಳನ್ನು ಪೂರಕ ಭದ್ರತಾದಾರರು ವಸೂಲು ಮಾಡಿಕೊಳ್ಳಲು ಈ ಕೆಳಗೆ ವಿವರಿಸಿರುವ ಆಸ್ತಿಯನ್ನು 06 ಸೆಪ್ಟಂಬರ್ 2023ರಂದು ಇ-ಹರಾಜು ಮೂಲಕ ಮಾರಾಟ ಮಾಡಲಿರುವರು. ಆಸ್ತಿಯ ವಿವರ, ಮೀಸಲು ಬೆಲೆ (ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ) ಮತ್ತು ಅರ್ನೆಸ್ಟ್ ಠೇವಣಿ ಹಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಲಾಟ್ ಸಂ.	ಮಾರಾಟಕ್ಕಿರುವ ಆಸ್ತಿಯ ವಿವರ	ಮೀಸಲು ಬೆಲೆ	ಇಎಂಡಿ
1.	ಆಸ್ತಿ-1 : ಶ್ರೀಮತಿ ಉಮಾದೇವಿಯವರ ಮಾಲೀಕತ್ವದಲ್ಲಿದೆ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ವಾಣಿಜ್ಯ / ಕೈಗಾರಿಕಾ ಕಟ್ಟಡದ ಪಂಚಾಯತ್ ಖಾತಾ ನಂ. 128/87, ವಿಶೇಷ ಸಂ. 152100500900200128, ಕರಡೈಲು ಗ್ರಾಮ, ನೆಲ್ಲಿಗೆರೆ ಗ್ರಾಮ ಪಂಚಾಯತ್, ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ ಇಲ್ಲಿದ್ದು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 60.96 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 26.5176 ಮೀಟರ್, ಒಟ್ಟು ವಿಸ್ತೀರ್ಣ 1616.51 ಚದರ ಮೀಟರ್‌ಗಳಿದ್ದು, ಚಕ್ಕುಬಂದಿ: ಪೂರ್ವಕ್ಕೆ: ದಾಸೇಗೌಡರವರ ಆಸ್ತಿ, ಪಶ್ಚಿಮಕ್ಕೆ: ಓಣಿ ರಸ್ತೆ, ಉತ್ತರಕ್ಕೆ: ರಂಗಮ್ಮರವರ ಆಸ್ತಿ, ದಕ್ಷಿಣಕ್ಕೆ: ಸರ್ವೆ ನಂ. 59/4ರಲ್ಲಿ ಉಳಿಕೆ ಆಸ್ತಿ. ಒಟ್ಟಾಗಿ ಈಗಿರುವ ಕಟ್ಟಡ ಮತ್ತು ರಚನೆಗಳು ಮತ್ತು ಯಾವುದೇ ಸಮಯದಲ್ಲಿ/ ಅಡಮಾನ ಮಾಡಿದ ನಂತರ ಸೇರಿಕೊಂಡಿರುವಂತಹ ಅದರಲ್ಲಿರುವ ಎಲ್ಲಾ ಸೇರಿಕೆಗಳು ಮತ್ತು ಕಟ್ಟಡಗಳು ಮತ್ತು ರಚನೆಗಳು ರಚಿತವಾಗಬೇಕಿದ್ದು, /ನಿರ್ಮಾಣವಾಗಬೇಕಿರುವಂತಹುದು ಮತ್ತು ಪ್ರಸ್ತುತ ಹಾಗೂ ಭವಿಷ್ಯದಲ್ಲಿ ಭೂಮಿಯ ಮೇಲ್ಪೈ ಹಾಗೂ ಒಳಭಾಗದಲ್ಲಿರುವ ಎಲ್ಲಾ ಅಳವಡಿಕೆಗಳು, ಪೀಠೋಪಕರಣಗಳು ಮತ್ತು ಘಟಕ ಮತ್ತು ಯಂತ್ರೋಪಕರಣಗಳು ಸೇರಿವೆ.	ರೂ. 1,62,00,000/- (ಒಂದು ಕೋಟಿ ಅರುವತ್ತೆರಡು ಲಕ್ಷ ರೂಪಾಯಿಗಳು ಮಾತ್ರ)	ರೂ. 16,20,000/- ಹದಿನಾರು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ

ಇ-ಹರಾಜು ಮೂಲಕ ಮಾರಾಟವಾಗಲಿರುವ ಆಸ್ತಿಗಳ ನಿಯಮ ಮತ್ತು ನಿಬಂಧನೆಗಳು:
1. ಆಸ್ತಿಗಳ ಪರಿವೀಕ್ಷಣೆ: ಆಸಕ್ತರು 10.08.2023 ರಿಂದ 04.09.2023ರವರೆಗೆ ಬೆಳಗ್ಗೆ 11.00ರಿಂದ ಮಧ್ಯಾಹ್ನ 3.00ರ ವರೆಗೆ ಪರಿವೀಕ್ಷಿಸಬಹುದಾಗಿದೆ. ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ: 05.09.2022ರಂದು ಸಂಜೆ 5.00ಗಂಟೆ.
2. ಹರಾಜು ಮಾರಾಟವನ್ನು ಆನ್‌ಲೈನ್ ಇ-ಹರಾಜು /ಬಿಡ್ಡಿಂಗ್ ಮೂಲಕ ಕೆಎಂಬಿಎಲ್‌ನ ಅಂಗೀಕೃತ ಸೇವಾ ಪೂರೈಕೆದಾರರಾದ ಮೆ॥ ಆಕ್ಷನ್ ಟೈಗರ್, ಕಚೇರಿ: ಅಹಮದಾಬಾದ್, ಗುಜರಾತ್-380006, ಸಹಾಯವಾಣಿ ಸಂ. : ಶ್ರೀ ಪ್ರವೀಣ್ ಕುಮಾರ್ : 7961200515/9722778828, ಮತ್ತು ಇ-ಮೇಲ್ : sales@AuctionTiger.net, ವೆಬ್‌ಪೋರ್ಟಲ್ www.AuctionTiger.net ಮೂಲಕ ನಡೆಯಲಿದೆ.
3. ಹರಾಜು ಮಾರಾಟವು 06ನೇ ಸೆಪ್ಟಂಬರ್ 2023ರಂದು ಬೆಳಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆಯ ಒಳಗಾಗಿ, ಒಂದು ವೇಳೆ ಹರಾಜು ಮುಗಿಯುವ ಕೊನೆಯ 5 ನಿಮಿಷಗಳ ಅವಧಿಯಲ್ಲಿ ಬಿಡ್ ಅಂತಿಮಗೊಂಡರೆ 5 (ಐದು) ನಿಮಿಷಗಳ ಸ್ವಯಂ ವಿಸ್ತರಣೆ ಮೂಲಕ ನಡೆಯಲಿದೆ.
4. ಮೀಸಲು ಬೆಲೆಗಿಂತ ಮೇಲ್ಪಟ್ಟು ಮೊತ್ತವನ್ನು ಬಿಡ್ ಅಧಿಕೃತ ಅಧಿಕಾರಿ (ಎಒ) ಯವರು ನಿಗದಿಪಡಿಸಿದ್ದು, ನಂತರದ ಬಿಡ್ ರೂ.2,00,000/- (ಎರಡು ಲಕ್ಷ ರೂಪಾಯಿಗಳು ಮಾತ್ರ) ದ ದ್ವಿಗುಣಗೊಳ್ಳುವಿಕೆ ಮೂಲಕ ನಂತರದ ಬಿಡ್‌ನ್ನು ಬಿಡ್ಡುದಾರರು ಉತ್ತಮಪಡಿಸಿಕೊಳ್ಳಬಹುದು.
5. ಅಧಿಕೃತ ಅಧಿಕಾರಿಯವರು ನಿಗದಿಪಡಿಸಿದ ಮೀಸಲು ಬೆಲೆಗಿಂತ ಕಡಿಮೆ ದರಕ್ಕೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ. ಬಿಡ್‌ದರರು ಮೀಸಲು ಬೆಲೆಗಿಂತ ಕಡಿಮೆ ದರವನ್ನು ನಮೂದಿಸಿದ್ದರೆ ಅಂತಹ ಬಿಡ್‌ನ್ನು ತಿರಸ್ಕರಿಸಿ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6. ಹರಾಜು / ಮಾರಾಟ ದೃಢೀಕರಣಗೊಂಡ ನಂತರ ಯಶಸ್ವಿ ಬಿಡ್ಡುದಾರರು / ಖರೀದಿದಾರರು ಶೇ 25 ರಷ್ಟು ಬಿಡ್ ಮೊತ್ತ (10% ಇಎಂಡಿ ಸೇರಿದಂತೆ) ವನ್ನು ಅದೇ ದಿನ ಪಾವತಿಸಬೇಕು ಹಾಗೂ ಉಳಿದ ಶೇ 75 ರಷ್ಟನ್ನು 15 ದಿನಗಳ ಒಳಗಾಗಿ, ಇಲ್ಲವೇ ಅಧಿಕೃತ ಅಧಿಕಾರಿಯವರ ವಿವೇಚನೆಗೆ ಬಿಟ್ಟಿರುವಂತೆ ಲಿಖಿತ ಮೂಲಕ ವಿಸ್ತರಣೆಗೆ ಸಹ ಒಪ್ಪಿಕೊಳ್ಳಬಹುದು. ಒಂದು ವೇಳೆ ನಿಗದಿತ ಸಮಯದಲ್ಲಿ ಹಣ ಪಾವತಿಸಲು ತಪ್ಪಿದಲ್ಲಿ ಬಿಡ್ಡುದಾರರು ಈಗಾಗಲೇ ಪಾವತಿಸಿರುವ 25% ಇಎಂಡಿ ಹಣವನ್ನು ಬ್ಯಾಂಕ್ ಮುಟ್ಟುಗೋಲು ಹಾಕಿಕೊಳ್ಳಲಿದೆ. ಒಂದು ವೇಳೆ ಅತೀ ಹೆಚ್ಚು ಬಿಡ್‌ಮಾಡಿದ ಬಿಡ್‌ದಾರರು ಹಣ ಪಾವತಿಸಲು ವಿಫಲವಾದರೆ, 24 ಗಂಟೆಗಳ ಒಳಗಾಗಿ ಅವರ ಪರವಾದ ಬಿಡ್‌ನ್ನು ರದ್ದುಗೊಳಿಸಿ, ನಂತರದ ಅತೀ ಹೆಚ್ಚು ಬಿಡ್‌ದಾರರಿಗೆ ಆಸ್ತಿ ಖರೀದಿಗೆ ಆಫರ್ ನೀಡಲಾಗುವುದು.
7. ಮೇಲೆ ಹೇಳಲಾದ ವೆಬ್‌ಸೈಟ್ ಲಿಂಕ್‌ಗೆ ಭೇಟಿ ನೀಡಿ, ಬಿಡ್ ನಮೂನೆ, ವಿವರವಾದ ನಿಯಮ ಮತ್ತು ನಿಬಂಧನೆಗಳನ್ನು ತಿಳಿದುಕೊಂಡು ಬಿಡ್‌ದಾರರು ಬಿಡ್ ಸಲ್ಲಿಸಲು ಕೋರಲಾಗಿದೆ.
8. ಆನ್‌ಲೈನ್/ಭೌತಿಕವಾಗಿ ಬಿಡ್ ಸಲ್ಲಿಸುವವರು ನಿಗದಿತ ನಮೂನೆಯಲ್ಲೇ ಸಲ್ಲಿಸಬೇಕು ಇತರೆ ಮಾದರಿ/ ಅಪೂರ್ಣ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.
9. ಎಲ್ಲಾ ಬಿಡ್ ದಾಖಲೆಗಳು ಕೆವೈಸಿ ದಾಖಲೆಗಳೊಂದಿಗೆ ಅಂದರೆ (1) ಪ್ಯಾನ್ ಕಾರ್ಡ್ (2) ಆಧಾರ್ ಕಾರ್ಡ್/ಪಾಸ್‌ಪೋರ್ಟ್ (3) ಪ್ರಸಕ್ತ ವಾಸದ ವಿಳಾಸದ ಪುರಾವೆ (4) ಸೂಕ್ತ ಇ-ಮೇಲ್ ವಿಳಾಸ (5) ಸಂಪರ್ಕ ಸಂಖ್ಯೆ (ಮೊಬೈಲ್ ಸಂ.) ಇತ್ಯಾದಿಗಳ ಸ್ಕ್ಯಾನ್ ಪ್ರತಿಯನ್ನು ಒಳಗೊಂಡ, ಡಿಡಿಯನ್ನು "ಕೋಟಕ್ ಮಹೀಂದ್ ಬ್ಯಾಂಕ್ ಲಿ, ಬೆಂಗಳೂರು" ಇಲ್ಲಿ ಪಾವತಿಯಾಗುವಂತೆ ಪಡೆದು ಸಲ್ಲಿಸಬೇಕು.
10. ಉದ್ದೇಶಿತ ಬಿಡ್ಡುದಾರರು ಇಎಂಡಿ ಪಾವತಿಸಿದ ದಾಖಲೆಯ ನಮೂನೆಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು.
11. ಉದ್ದೇಶಿತ ಬಿಡ್‌ದಾರರು ಸೂಕ್ತವಾದ ಇ-ಮೇಲ್ ವಿಳಾಸವನ್ನು ಹೊಂದಿರಬೇಕು, ಏಕೆಂದರೆ, ಮುಂದಿನ ಎಲ್ಲಾ ಸಂವಹನಗಳನ್ನು ಅಧಿಕೃತ ಅಧಿಕಾರಿಯವರು ಇ-ಮೇಲ್ ಮೂಲಕವೇ ನಡೆಸಲಿರುವರು.
12. ಉದ್ದೇಶಿತ ಬಿಡ್‌ದಾರರು ಇ-ಹರಾಜಿನಲ್ಲಿ ಭಾಗವಹಿಸುವ ಮೊದಲು ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ, ಆನ್‌ಲೈನ್/ಖುದ್ದಾಗಿ ಇ-ಹರಾಜಿನಲ್ಲಿ ಪಾಲ್ಗೊಳ್ಳುವ ಬಗ್ಗೆ ತರಬೇತಿಯನ್ನು ಪಡೆದುಕೊಳ್ಳಬಹುದು.
13. ಆದಾಗ್ಯೂ, ಯಾವುದೇರೀತಿಯ ತಾಂತ್ರಿಕ ಲೋಪ/ವಿದ್ಯುತ್ ವೈಫಲ್ಯ ಇತ್ಯಾದಿಗಳಿಗೆ ಅಧಿಕೃತ ಅಧಿಕಾರಿ ಅಥವಾ ಪೂರಕ ಭದ್ರತಾದಾರರು ಜವಾಬ್ದಾರರಾಗಿರುವುದಿಲ್ಲ.
14. ಯಶಸ್ವಿಯಾಗದ ಇಎಂಡಿ ಹಣವನ್ನು ಇ-ಹರಾಜು ಪ್ರಕ್ರಿಯೆ ಮುಗಿದ 7 ಕೆಲಸದ ದಿನಗಳ ಒಳಗಾಗಿ ಹಿಂತಿರುಗಿಸಲಾಗುವುದು
15. ಮಾರಾಟವು ಬ್ಯಾಂಕ್‌ನ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. ಒಂದು ವೇಳೆ ಸಾಲಗಾರರು/ಜಾಮೀನುದಾರರು ಪೂರಕ ಭದ್ರತಾದಾರರಿಗೆ ಸಂಪೂರ್ಣ ಹಣವನ್ನು ಇ-ಹರಾಜಿನ ನಿಗದಿತ ದಿನಾಂಕ ಮತ್ತು ಸಮಯದ ಒಳಗಾಗಿ ಪಾವತಿಸಿದಲ್ಲಿ ಮಾರಾಟವನ್ನು ನಡೆಸಲಾಗುವುದಿಲ್ಲ.
16. ಅಧಿಕೃತ ಅಧಿಕಾರಿಯವರಿಗೆ ತಿಳಿದಿರುವಂತೆ, ಮೇಲಿನ ಆಸ್ತಿಗಳಿಗೆ ಯಾವುದೇ ಪರಭಾರೆ ಇರುವುದಿಲ್ಲ. ಆದಾಗ್ಯೂ, ಉದ್ದೇಶಿತ ಟೆಂಡರ್‌ದಾರರು ತಮ್ಮ ಸ್ವ-ಇಚ್ಛೆಯಿಂದ ಟೈಟಲ್/ಪರಭಾರೆ ಇತ್ಯಾದಿಗಳ ಬಗ್ಗೆ ಸ್ವತಂತ್ರವಾಗಿ ವಿಚಾರಣೆ ನಡೆಸಬಹುದಾಗಿದೆ. ಮಾರಾಟಕ್ಕಿಟ್ಟಿರುವ ಈ ಆಸ್ತಿ ಬಗ್ಗೆ ಯಾವುದೇ ದರ, ಪರಭಾರೆ ಅಥವಾ ಸರ್ಕಾರಕ್ಕೆ ಇನ್ನಿತರೆ ಯಾವುದೇ ಬಾಕಿಗಳಿದ್ದರೆ ಅಧಿಕೃತ ಅಧಿಕಾರಿಗಳು ಅಥವಾ ಬ್ಯಾಂಕ್ ಜವಾಬ್ದಾರಿಯಾಗಿರುವುದಿಲ್ಲ. ಅಧಿಕೃತ ಅಧಿಕಾರಿಯವರಿಗೆ ತಿಳಿದೋ ಅಥವಾ ತಿಳಿಯದೆಯೋ ಪ್ರಸಕ್ತ ಇದ್ದರೆ/ ಮುಂದೆ ಬರಬಹುದಾದ ಯಾವುದೇ ಪರಭಾರೆ ಇದ್ದಲ್ಲಿ, ಅದು ಸೇರಿದಂತೆ ಮಾರಾಟ ನಡೆಸಲಾಗುವುದು.
17. ಯಾವುದೇ ಕಾರಣ ನೀಡದೆ ಅಧಿಕೃತ ಅಧಿಕಾರಿಯವರು ಯಾವುದೇ ಅಥವಾ ಎಲ್ಲಾ ಟೆಂಡರ್/ಟೆಂಡರ್‌ಗಳನ್ನು (ಯಾವುದೇ ಆಸ್ತಿಗೆ) ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಇ-ಹರಾಜನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
18. ಖರೀದಿದಾರರ ಪರವಾಗಿ ಅಧಿಕೃತ ಅಧಿಕಾರಿಯವರು "ಮಾರಾಟ ಪ್ರಮಾಣಪತ್ರ" ವನ್ನು ನೀಡುತ್ತಾರೆ. ನೋಂದಣಿ ಶುಲ್ಕ, ಮುದ್ರಾಂಕ ಶುಲ್ಕ, ಕನ್‌ವೇನೆನ್ಸ್, ವೈಟಆಟ್, ಟಿಡಿಎಸ್, ಜಿಎಸ್‌ಟಿ ಇತ್ಯಾದಿಗಳು ಯಾವುದೇ ಶುಲ್ಕ ಮತ್ತು ವೆಚ್ಚಗಳನ್ನು ಖರೀದಿದಾರರೇ ಭರಿಸಬೇಕು. ಮಾರಾಟವು ಸರ್ಫೇಸಿ ಕಾಯಿದೆ/ನಿಯಮಗಳು 2002ರ ಅನ್ವಯ ಮೇಲೆ ಹೆಸರಿಸಿದ ನಿಯಮ ಮತ್ತು ನಿಬಂಧನೆಗಳಂತೆ ನಡೆಯಲಿದೆ.

ಟಿಡಿಎಸ್ ಕಡಿತ ಮಾಡಲಾಗುವುದು	ಹರಾಜಿನ ದರದ 1%

- ಅಡಮಾನದಾರರ ಹೆಸರಿನಲ್ಲಿ ಟಿಡಿಎಸ್ ಕಡಿತ ಮಾಡಲಾಗುವುದು
- ಒಂದು ವೇಳೆ ಅಡಮಾನ ಆಸ್ತಿಯು ಜಂಟಿ ಮಾಲೀಕತ್ವದಲ್ಲಿದ್ದರೆ, ಕ್ರಯಪತ್ರದಲ್ಲಿ ಮಾಲೀಕತ್ವದ ಅನುಪಾತದ ಬಗ್ಗೆ ನಿರ್ದಿಷ್ಟವಾಗಿ ನಮೂದಾಗಿಲ್ಲವಾದರೆ ಟಿಡಿಎಸ್‌ನ್ನು ಮೊದಲ ಮಾಲೀಕರ ಹೆಸರಿನಲ್ಲಿ ಕಡಿತ ಮಾಡಲಾಗುವುದು.
- ಹರಾಜು ಖರೀದಿದಾರರು ಟಿಡಿಎಸ್ ಠೇವಣಿಯ ನಂತರ ನಮೂನೆ 16ಎ ನ್ನು ಟಿಡಿಎಸ್ ಪಾವತಿ ಮತ್ತು ದೃಢೀಕರಣಕ್ಕಾಗಿ ಸಲ್ಲಿಸಬೇಕು.

19. ಮಾರಾಟವು ಸರ್ಫೇಸಿ ಕಾಯಿದೆ/ನಿಯಮಗಳು 2002ರಲ್ಲಿ ನಿಗದಿಪಡಿಸಿದ ನಿಬಂಧನೆಗಳ ಅನುಸಾರ ನಡೆಯಲಿದೆ.
20. ಆಸ್ತಿ ಪರಿವೀಕ್ಷಣೆ ಸೇರಿದಂತೆ ಹರಾಜಿನ ಬಗ್ಗೆ ಯಾವುದೇ ಹೆಚ್ಚಿನ ಮಾಹಿತಿಗಾಗಿ ಆಸಕ್ತ ಬಿಡ್‌ದಾರರು ಶ್ರೀ ಶ್ರೀಧರ ಎಸ್ ಇವರನ್ನು ದೂ: 9916165915 ಎಲ್ಲಾ ಕೆಲಸದ ದಿನದಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯ ಒಳಗಾಗಿ ಸಂಪರ್ಕಿಸಬಹುದಾಗಿದೆ

ಸ್ಥಳ: ಬೆಂಗಳೂರು
ದಿನಾಂಕ: 05.08.2023

(ಅಧಿಕೃತ ಅಧಿಕಾರಿ)
ಕೋಟಕ್ ಮಹೀಂದ್ರ ಬ್ಯಾಂಕ್

‘ಗೃಹಜ್ಯೋತಿ’ ರೈತರ ತೋಟದ ಮನೆಗೂ ನೀಡಿ

ಕೊಬ್ಬರಿ ನೆಫೆಡ್ ಕೇಂದ್ರ ತೆರೆಯಿರಿ

ತಿಪಟೂರು ಯುಜಿಡಿ ಸರಿಪಡಿಸಿ

ತಿಪಟೂರು: ಅನ್ನದಾತನ ತೋಟದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಾರೆ. ಅವರಿಗೂ ಗೃಹ ಜ್ಯೋತಿ ನೀಡಬೇಕೆಂದು ಕಾಂಗ್ರೆಸ್ ಮುಖಂಡ ಲೋಕೇಶ್ವರ್ ಸರಕಾರಕ್ಕೆ ಮನವಿ ಮಾಡಿದರು.

ತಿಪಟೂರಿನ ಕೌಸ್ತುಭ ಹೋಟೆಲ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ರೈತರು ತಮ್ಮ ಜಮೀನುಗಳಲ್ಲಿ ವಾಸಕ್ಕೆ ಮನೆ ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೆ. ಇವರು ಕೃಷಿ ಪಂಪ್‌ಸೆಟ್ ವಿದ್ಯುತ್ ಬಳಸುತ್ತಿದ್ದು, ಇವರಿಗೂ ಗೃಹಜ್ಯೋತಿ ಲಭಿಸಬೇಕು. ಕೊಬ್ಬರಿ ಬೆಳೆಗಾರರಿಗೆ 1250 ರೂ. ಘೋಷಣೆ ಮಾಡಿದ್ದು, ಅದರಂತೆ ಕೊಬ್ಬರಿ ಖರೀದಿಯ ನೆಫೆಡ್ ಕೇಂದ್ರ ಮುಚ್ಚಿದ್ದು, ಕೂಡಲೇ ತೆರೆಯಬೇಕು ಹಾಗೂ ಬೆಂಬಲ ಬೆಲೆ 2000 ರು. ಕೊಡಬೇಕು ಮನವಿ ಮಾಡಿದರು.

ನಗರದ ಯುಜಿಡಿಗಳಿಂದ ನೀರು ಸರಿಯಾಗಿ ಹೋಗುತ್ತಿಲ್ಲ, ನಗರದ ಗಣೇಶ ಚಿತ್ರಮಂದಿರದ ಬಳಿ, ವೈಭವ ಕಾಂಪ್ಲೇಕ್ಸ್, ಹಳೇ ಬಸ್ ಸ್ಟಾಂಡ್ ಹತ್ತಿರ ನಿಲ್ಲುವ ಕೊಳಚೆ ನೀರು ಹೊರ ಹೋಗಲು ವ್ಯವಸ್ಥೆ ಮಾಡಬೇಕು ಎಂದರು.

IN THE COURT OF THE SENIOR CIVIL JUDGE AND J.M.F.C. AT C.N.HALLI
Cri.Mis.No. 136/2023
Cri.Mis.No. 137/2023

Petitioners: 1. Kariyappa S/o. Late Kariyappa, Aged about 62 years, 2. Rangamma D/o Late Kariyappa, Aged about 60 years, 3. Rathnamma D/o Late Kariyappa, Aged about 58 years, 4. Honnappa S/o Late Kariyappa, Aged about 56 years. All petitioners are R/a Davanadahosahalli, Handankere Hobli, C.N. Halli Taluk, Tumkur Dist.

V/s

Respondent:
1. The Thahasheldar C.N.Halli

PAPER PUBLICATION IN VISHWAVANI

The petitioners filed the above petitions under section 13(3) of the death and Birth Act to obtain the death certificates of Lakshmamma W/o Late Marichikkaiah was died on 02-05-1973 and Marichikkaiah S/o Rangegowda was died on 11-07-1962 at, Davanadahosahalli, Handankere Hobli, Tumkur Dist If anybody are having any objection or right may file their objection in this case. The case is posted to 04-09-2023 at 11.AM. If anybody are not file their objection the matter will be heard and decide the same in favour of the petitioners. Given under my seal and signed on the day of 27 month of July 2023

By order of the Court.
Sheristedar, JMFC Court, C.N. Halli
Advocate for Petitioners
B. R. Yathishnaik, C.N.Halli

IN THE COURT OF THE SENIOR CIVIL JUDGE AND J.M.F.C. AT C.N.HALLI
Cri.Mis.No. 131/2023
Cri.Mis.No. 132/2023
Cri.Mis.No. 133/2023

Petitioners: 1.Puttaiah S/o Late Baiaiah Aged about 47 years, 2. Indramma D/o Late Balaiah Aged about 45 years, 3. Basavaraju S/o Late Baiaiah Aged about 45 years, 4. Bhagyamma D/o Late Balaiah Aged about 42 years, 5. Lokesh N.B W/o Late Balaiah, Aged about 70 years. All petitioners are R/a Niruvagallu Gollarahatti Handankere Hobli, C.N.Halli Taluk,Tumkur Dist.

V/s

Respondent:
1. The Thahasheldar C.N.Halli

PAPER PUBLICATION IN VISHWAVANI

The petitioners filed the above petitions under section 13(3) of the death and Birth Act to obtain the death certificates of Chittamma W/o Balaiah was died on 05-04-2002 and Eramma W/o Hosuraiah was died on 11-11-2014 and Hosuraiah S/o Kuntaiah was died on 16-01-1998 at Niruvagallu Gollarahatti, Handankere Hobli, Tumkur Dist If anybody are having any objection or right may file their objection in this case. The case is posted to 04-09-2023 at 11.AM. If anybody are not file their objection the matter will be heard and decide the same in favour of the petitioners. Given under my seal and signed on the day of 27 month of July 2023

By order of the Court:
Sheristedar, JMFC Court, C.N.Halli
Advocate for Petitioners:
B. R. Yathishnaik, C.N.Halli

ಎಸ್ಸಿಎಸ್ಟಿ ಅನುದಾನ ದುರ್ಬಳಕೆ ವಿರೋಧಿಸಿ ಬೃಹತ್ ಪ್ರತಿಭಟನೆ

ಕಾಂಗ್ರೆಸ್ ಬಣ್ಣ ಬಯಲು | ನಿಜವಾದ ದಲಿತ ವಿರೋಧಿ ಸಿಎಂ ಸಿದ್ದರಾಮಯ್ಯ: ಮಹೇಶ್

ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಳ್ಳಲು ಮುಂದಾಗಿರುವ ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಎಸ್ಸಿ ಮತ್ತು ಎಸ್ಟಿ ಮೋರ್ಚಾದಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಚಾಮರಾಜನಗರ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗೆ ಮೀಸಲಿಟ್ಟಿರುವ ಎಸ್‌ಇಪಿ ಮತ್ತು ಟಿಎಸ್‌ಪಿ ಅನುದಾನವನ್ನು 5 ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಳ್ಳಲು ಮುಂದಾಗಿರುವ ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಎಸ್ಸಿ ಮತ್ತು ಎಸ್ಟಿ ಮೋರ್ಚಾದಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರು ಬಿಜೆಪಿ ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ಎಸ್ಸಿ ಮೋರ್ಚಾ ಅಧ್ಯಕ್ಷ ಮೂಡ್ನಾಕೂಡು ಪ್ರಕಾಶ್, ಮಾಜಿ ಶಾಸಕರಾದ ಎನ್. ಮಹೇಶ್, ಸಿ.ಎಸ್. ನಿರಂಜನ್‌ಕುಮಾರ್ ನೇತೃತ್ವದಲ್ಲಿ ಮೆರವಣಿಗೆ ಹೊರಟರು. ಭುವನೇಶ್ವರ ವೃತ್ತದಲ್ಲಿ ಕೆಲ ಕಾಲ ರಸ್ತೆ ತಡೆ ನಡೆಸಿ, ನಂತರ ಬಿ. ರಾಚಯ್ಯ ಜೋಡಿ ರಸ್ತೆಯ ಮಾರ್ಗವಾಗಿ ಜಿಲ್ಲಾಡಳಿತ ಭವನಕ್ಕೆ ತಲುಪಿದರು. ಸಿಎಂ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಹಾಗೂ ಎಸ್‌ಸಿ, ಎಸ್‌ಟಿ ಶಾಸಕರ ವಿರುದ್ಧ ಘೋಷಣೆ ಕೂಗಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎನ್. ಮಹೇಶ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನಿಜವಾದ ದಲಿತ ವಿರೋಧಿಯಾಗಿದ್ದಾರೆ. ಎಸ್‌ಸಿ ಹಾಗೂ ಎಸ್ ಟಿ ಸಮುದಾಯಗಳ ಕಲ್ಯಾಣಕ್ಕಾಗಿ ಈ ಅನುದಾನವನ್ನು ಬಳಸದೇ ಐದು ಗ್ಯಾರಂಟಿ ಯೋಜನೆಗಳಿಗೆ ಬಳಸಲು ಮುಂದಾಗಿರುವುದನ್ನು ಬಿಜೆಪಿ ತೀವ್ರವಾಗಿ ಖಂಡಿಸುತ್ತದೆ ಎಂದರು.

ಕಾಂಗ್ರೆಸ್ ಪಕ್ಷದ ನಿಜವಾದ ದಲಿತ ಹಾಗೂ ಅಂಬೇಡ್ಕರ್ ವಿರೋಧಿ ಎಂಬುವುದು ಮತ್ತೊಮ್ಮೆ ಸಾಭೀತಾಗಿದೆ. ನಮ್ಮ ಸಮುದಾಯದ ಪ್ರಬುದ್ಧರ ಇದನ್ನು ಅರ್ಥ ಮಾಡಿಕೊಳ್ಳಬೇಕು. ಕಳೆದ 60 ವರ್ಷಗಳಿಂದಲೂ ದಲಿತರ ಮತಗಳನ್ನು ಓಟ್ ಬ್ಯಾಂಕ್ ಮಾಡಿಕೊಂಡು ಅಧಿಕಾರ ಬಂತು ಆ ಸಮುದಾಯಗಳನ್ನು ತುಳಿಯುತ್ತಲೇ ಬಂದಿದ್ದಾರೆ. ಈಗ ಸಿಎಂ ಸಿದ್ದರಾಮಯ್ಯ ದಲಿತರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.

ಇದರ ವಿರುದ್ಧ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡುವ ಜತೆಗೆ ಕಾಂಗ್ರೆಸ್ ಪಕ್ಷದಿಂದ ಅಂಬೇಡ್ಕರ್ ಮಾಡಿರುವ ಅಪಮಾನ ಹಾಗೂ ದಲಿತರಿಗೆ ಮಾಡಿರುವ ಅನ್ಯಾಯ ವಿರುದ್ಧ ಜನ ಜಾಗೃತಿ ಮೂಡಿಸಲಾಗುತ್ತದೆ. ಬಿಜೆಪಿ ಈ ವಿಚಾರವನ್ನು ಸದನದ ಹೊರಗೆ ಹಾಗೂ ಒಳಗೂ ಪ್ರತಿಭಟಿಸುತ್ತದೆ ಎಂದು ತಿಳಿಸಿದರು.

ಮಾಜಿ ಶಾಸಕ ಸಿ.ಎಸ್. ನಿರಂಜನ್‌ಕುಮಾರ್ ಮಾತನಾಡಿ, ಬಿಜೆಪಿ ಅವಧಿಯಲ್ಲಿಯೇ ಹೆಚ್ಚು ಅನುದಾನವನ್ನು ದಲಿತ ಸಮುದಾಯ ಗಳ ಅಭಿವೃದ್ಧಿಗೆ ನೀಡಿದೆ ಎಂದರು.

ಬಳಿಕ ಸ್ಥಳಕ್ಕಾಗಮಿಸಿದ ಉಪಭಾಗಾಧಿಕಾರಿ ಮಹೇಶ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಛಲವಾದಿ ಮಹಾಸಭಾದ ರಾಜ್ಯಾಧ್ಯಕ್ಷ ಕೆ. ಶಿವರಾಂ, ಮುಖಂಡರಾದ ವೆಂಕಟರಮಣಸ್ವಾಮಿ ಪಾಪು, ಎಂ. ರಾಮಚಂದ್ರ, ನಿಜಗುಣರಾಜು, ಜಿ. ನಾಗಶ್ರೀ ಪ್ರತಾಪ್, ನಿಶಾಂತ್, ಮಾಜಿ ನಗರಸಭಾ ಅಧ್ಯಕ್ಷರಾದ ಸುರೇಶ್ ನಾಯಕ, ಮಹದೇವನಾಯಕ, ಚುಡಾ ಮಾಜಿ ಅಧ್ಯಕ್ಷರಾದ ಕುಲಗಾಣ ಶಾಂತಮೂರ್ತಿ, ಎಸ್. ಬಾಲಸುಬ್ರಮಣ್ಯ, ಆರ್. ಸುಂದರ್, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಯಸುಂದರ್, ಜಿಲ್ಲಾ ಕಾರ್ಯದರ್ಶಿ ಪದ್ಮ, ಸರಸ್ವತಿ, ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಟಗರಪುರ ರೇವಣ್ಣ, ಜಿಲ್ಲಾ ಮೋರ್ಚಾ ಕಾರ್ಯದರ್ಶಿ ಕಬ್ಬಹಳ್ಳಿ ರೇವಣ್ಣ, ಗ್ರಾಮಾಂತರ ಮಂಡಲದ ಅಧ್ಯಕ್ಷ ಮುತ್ತಿಗೆ ಮೂರ್ತಿ, ಮಹಿಳಾ ಮೋರ್ಚಾ ಅಧ್ಯಕ್ಷೆ ಮಲೆಯೂರು ಕಮಲಮ್ಮ, ವನಾಜಾಕ್ಷಿ, ದಾಕ್ಷಾಯಣಿ, ಗುಂಡ್ಲುಪೇಟೆ ಗೀತಾ, ಹೊಂಗನೂರು ಮಹದೇವಸ್ವಾಮಿ, ವೇಣುಗೋಪಾಲ್, ಪಣ್ಯದಹುಂಡಿ ಸತೀಶ ಇತರರು ಇದ್ದರು.

> ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರು ಮುಖ್ಯಮಂತ್ರಿಗಳನ್ನು ಓಲೈಸಿಕೊಳ್ಳುವ ಸಲುವಾಗಿ ದಲಿತ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ. 11 ಸಾರ ಕೋಟಿ ರು. ದಲಿತ ಸಮುದಾಯದ ಅಭಿವೃದ್ಧಿಗೆ ಬಳಕೆ ಮಾಡದೇ ಐದು ಗ್ಯಾರಂಟಿಗಳಿಗೆ ನೀಡುತ್ತಿವೆ ಎಂದು ಹೇಳಿರುವುದು ದಲಿತ ಸಮುದಾಯಕ್ಕೆ ಮಾಡಿದ ಅನ್ಯಾಯವಾಗಿದೆ. ಕೂಡಲೇ ಬರಂಗ ಕ್ಷಮೆ ಯಾಚನೆ ಮಾಡಬೇಕೆಂದು ಒತ್ತಾಯಿಸಿದರು.
>
> - **ಮೂಡ್ನಕೂಡು ಪ್ರಕಾಶ್** ಬಿಜೆಪಿ ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ